ಸುರಿಯುತ್ತದೆ, ದಾದಾನೇ ಅವನ ಹುಡುಗರಿಗೆ ಹಂಚೋಕೆ ಹತ್ತು ಸಾವಿರ ಪ್ರತಿಗಳನ್ನ ಹಣ ಕೊಟ್ಟು ಕೊಂಡುಕೋತಾನಂತೆ ಎಂಬ ಸತ್ಯ ಹೇಳಿದರೆ ಕೆಂಡಾಮಂಡಲವಾದಳು. ಹಣ ಸಿಗುತ್ತೆ ಅಂತ ಕೊಳಚೆ ನೀರು ಕುಡಿಯೋದೆಷ್ಟು ಸರಿ ಅಂತ ಅಪದ್ಧ ಬೇರೆ ನುಡಿದಳು.

ಅಲ್ಲ, ಮದುವೆ ಮಾಡಿ ಕೊಟ್ಟ ಅನಂತರ ತವರಿಗೂ ತಮಗೂ ಋಣ ಹರಿಯಿತು ಅಂತ ಇರಬೇಕು ಹೆಂಗಸರು. ಈಗ ನನ್ನ ಹೆಂಡತಿ ಲಾವಣ್ಯ ಇಲ್ಲವೇ? ಏನೋ ನಾನೊಂದು ಮಾತು ಹೇಳಿದರೆ, ಬೇರೆ ತಲೆಬಿಸಿಯಲ್ಲಿ ಸಿಟ್ಟಿನಿಂದ ಒಂದು ಬೈಗುಳ ಎಸೆದರೆ, ಯಾವುದೋ ಸಂಗತಿಯಲ್ಲಿ ತಲೆ ಹಾಕ ಬೇಡ ಎಂದು ಹರಿಹಾಯ್ದರೆ ಅವಳೇನು ಮುನಿಸಿಕೊಂಡು ತವರಿಗೆ ಹೋಗಿ ಕೂರುತ್ತಾಳೆಯೇ? ಗಂಡಸರಿಗೆ ಮನೆಯ ಹೊರಗೆ ನೂರೆಂಟು ಒದ್ದಾಟಗಳಿರುತ್ತವೆ ಅಂತ ಅರ್ಥಮಾಡಿಕೊಂಡವಳು ಅವಳು. ನಾನು ಮಾಡಬೇಡ ಅಂದ ಕೆಲಸವನ್ನು ಕನಸಿನಲ್ಲೂ ಮಾಡಲಾರಳೇನೋ. ನನ್ನ ಎಂಟು ವರ್ಷದ ಮಗಳು ಸಿಮಿಯೂ ಅಷ್ಟೇ. "ನಾನು ಡ್ಯಾಡೀಸ್ ಗರ್ಲ್, ಮೈ ಡ್ಯಾಡಿ ಸ್ಟ್ರಾಂಗೆಸ್ಟ್" ಎನ್ನುವಾಗ ಎಂಥ ಹೆಮ್ಮೆ ಅವಳ ಕಣ್ಣುಗಳಲ್ಲಿ!

ಆದರೆ, ಈ ಸುನೇತ್ರಳದು ಬೇರೆಯದೇ ಪದ್ಧತಿ. ತಂದೆಯಿಲ್ಲದ ಮಗಳು ಎಂದು ನಾವೇ ಹೆಚ್ಚು ಮುದ್ದು ಮಾಡಿ ಬೆಳೆಸಿದ್ದಕ್ಕೆ ಹೀಗಾಯಿತೇನೋ. ಬಾಯಿ ತೆರೆದರೆ ಸ್ತ್ರೀವಾದ, ಸ್ತ್ರೀ ಸ್ವಾತಂತ್ರ್ಯ, ಮಹಿಳೆಯರ ಹಕ್ಕುಗಳು, ಸೆಕ್ಷುಯಲ್ ಫ್ರೀಡಮ್ ಇಂಥವೇ ಅಧಿಕಪ್ರಸಂಗಗಳು ಅವಳ ಮಾತುಗಳಲ್ಲಿ. ಸ್ವಾತಂತ್ರ್ಯ ಕೊಟ್ಟಿದ್ದೇ ಹೆಚ್ಚಾಗಿದೆ ಬಿಡು ಅಂದರೆ ನೀವು ಕೊಡುವುದೇನು ನಮಗೆ ಸ್ವಾತಂತ್ರ್ಯವನ್ನು ಅಂತ ಜಗಳ ಬೇರೆ. ಇಡೀ ಗಂಡಸು ಕುಲದ ಜನ್ಮವನ್ನೇ ಜಾಲಾಡುತ್ತಾಳೆ. ಅಲ್ಲ, ಗಂಡ ಬಿಟ್ಟು ಬಂದವಳನ್ನು ನಾನು ಮನೆಗೆ ಸೇರಿಸುವುದಿಲ್ಲ ಅಂತ ಹೇಳಿದ್ದರೆ ಯಾರೇನು ಹರಿದುಕೊಳ್ಳಲು ಆಗುತ್ತಿತ್ತು? ಮನುಷ್ಯ ಅಂದಮೇಲೆ ನೆನಗುಣ ಇರಬೇಕು.

ಅವಳ ಗಂಡ ಸುನೀಲ ಎಷ್ಟು ಒಳ್ಳೆಯವನು. ಇಲ್ಲಿನ ರೂಪಾಯಿಗಳಲ್ಲಿ ಆರು ಲಕ್ಷ ಸಂಬಳವಿದೆಯಂತೆ ಅಮೆರಿಕದಲ್ಲಿ ಅವನಿಗೆ ತಿಂಗಳಿಗೆ. ನೋಡಲೂ ಸುರರೂಪನಾಗಿದ್ದಾನೆ. ಅಷ್ಟು ದುಡಿದರೂ ಒಂಚೂರೂ ಸೊಕ್ಕಿಲ್ಲ. ಒಂದೂ ಕೆಟ್ಟ ಅಭ್ಯಾಸವಿಲ್ಲ. "ನನ್ನ ಹಣದಲ್ಲಿ ನಾನು ಯಾವತ್ತೂ ಕುಡಿಯಬಾರದು ಅಂತ ನಮ್ಮ ತಂದೆ ಭಾಷೆ ತೊಗೊಂಡಿದ್ದರು ಭಾವಾ. ಅದಕ್ಕೇ ಯಾರಾದರೂ ಪಾರ್ಟಿಗಳಲ್ಲಿ ಆಫರ್ ಮಾಡಿದರಷ್ಟೇ ಒಂದು ಪೆಗ್ ತೊಗೊಳ್ಳೋದು" ಎಂದಾಗ ಎಂಥ ಪ್ರಾಮಾಣಿಕತೆಯಿತ್ತು ಅವನ ದನಿಯಲ್ಲಿ. ತಥ್, ನಮ್ಮ ಚಿನ್ನವೇ ಸರಿಯಿಲ್ಲದಿದ್ದರೆ ಏನು ಮಾಡೋಕೆ ಸಾಧ್ಯ?

ಅಂಥ ಬಂಗಾರದಂಥ ಗಂಡನನ್ನ ಯಾಕೆ ಬಿಟ್ಟು ಬಂದೆ ಅಂತ ಕೇಳಿದರೆ ಅವನು ಬಡಿಸು ಅಂದ ಎನ್ನುತ್ತಾಳೆ.

"ಏನನ್ನು ಬಡಿಸು ಅಂದ?"

"ಊಟವನ್ನು."

"ಎಂಥ ಊಟವನ್ನು?" ಮನುಷ್ಯರನ್ನೇನಾದರೂ ಬೇಯಿಸಿ ತಿನ್ನುವ ರೂಢಿಯಿದೆಯೇ ಅಂತ ನನಗೆ ಭಯವಾಯಿತು. ಈ ಅಮೆರಿಕದಲ್ಲಿ ಸೆಟಲ್ ಆಗಿರೋ ಬೋಳಿಮಕ್ಕಳು ಏನೇನು ಖಯಾಲಿಗಳನ್ನು ಅಂಟಿಸಿಕೊಂಡಿರುತ್ತಾರೋ ಯಾರಿಗೆ ಗೊತ್ತು.

"ಎಂಥ ಊಟವನ್ನು ಅಂದರೆ ಏನರ್ಥ ಅಣ್ಣ? ಅಡುಗೆ ಮಾಡಿಟ್ಟಿದ್ದಲ್ಲದೇ ಮುಂದೆ ನಿಂತು ಬಡಿಸಲೂ ಬೇಕಂತೆ."

"ಓಹ್ ಅಂದ್ರೆ ನಾವು ತಿನ್ನುವ ಊಟವನ್ನೇ ತಾನೇ? ಬಡಿಸೋದು ಅಷ್ಟು ದೊಡ್ಡ ವಿಷಯಾನಾ?"

ಒಂದು ನಿಮಿಷ ತಡೆದು ಉತ್ತರಿಸಿದಳು.